# ಕಟು ವಾಸ್ತವದೊಂದಿಗೆ ಸುಂದರ ಸ್ವಪ್ನಗಳು

ತಳ್ಳು ತಳ್ಳು ತಳ್ಳು ತಳ್ಳು ತಳ್ಳೋ ಗೋಡಿ
ತಳ್ಳು ತಳ್ಳು ತಳ್ಳು ತಳ್ಳು ತಳ್ಳು ಡಕೋಟ ಗಾಡಿ
ಈ ಡಕೋಟ ಗಾಡಿ

ಎಲ್ಲರೂ ಸೇರಿ ತಳ್ಳಿದರೆ ಮಾತ್ರ ಈ ಗಾಡಿ ಸ್ಟಾರ್ಟ್ ಆಗೋದು ಎಂದು ಸೇರಿಸಿದೆ. 'ಡ್ರೈವರ್ ಮಾತ್ರ ಬುದ್ಧಿವಂತನಾದರೆ ಸಾಲದು' ಎಂದು ಹೇಳಿ ಅಧ್ಯಕ್ಷರನ್ನು ಉಬ್ಬಿಸಿದೆ. ಅವರ ಭಾಷಣದಲ್ಲಿದ್ದ ಕೆಲವು ಮಾತುಗಳನ್ನು ಉದಾಹರಿಸಿ ಬೌದ್ಧಿಕವಾಗಿ ವ್ಯಾಖ್ಯಾನಿಸಿ ಪ್ರಶಂಸಿದೆ. ಅವರು ಎಲ್ಲವನ್ನು ಕೇಳಿಸಿ ಕೊಳ್ಳುತ್ತಿದ್ದರು. ಅದನ್ನು ನಾನು ಕಡೆಗಣ್ಣಿನಿಂದ ನೋಡಿದೆ.

ಜಯರಾಮ ಹೇಳಿದ್ದು ಸರಿಯಾಗಿಯೇ ಇದೆಯೆನಿಸಿತು. ಅಧ್ಯಕ್ಷರು ನನ್ನನ್ನು ದತ್ತು ತೆಗೆದುಕೊಂಡರು. ಅವರ ಮನೆಗೆ ಕರೆದುಕೊಂಡು ಹೋಗಿ ಹೆಂಡತಿ ಮತ್ತು ಮಗಳಿಗೆ ಪರಿಚಯಿಸಿದರು. ರಸ್ತೆಯ ಬದಿಯಲ್ಲಿದ್ದ ಅಂಗಡಿಯ ಉಪ್ಪರಿಗೆಯಲ್ಲಿ ನನಗೊಂದು ರೂಮನ್ನು ಸಜ್ಜುಗೊಳಿಸಿದರು.

'ನೀನು ಬಾಡಿಗೆಯೇನೂ ಕೊಡೋದು ಬೇಡ. ಕೆಲಸ ಸಿಗುವವರೆಗೂ ಇದನ್ನು ನೀನು ಫ್ರೀಯಾಗೇ ಇಟ್ಕೋ.'

ಮಂಡಲ ಅಧ್ಯಕ್ಷರು ನನ್ನಿಂದ ಒಂದು ಮನವಿ ಪತ್ರವನ್ನು ಬರೆಸಿ ತೆಗೆದುಕೊಂಡರು. ಸಹಕಾರ ಬ್ಯಾಂಕಿನಲ್ಲಿ ಕೆಲಸಕ್ಕಾಗಿ ಒಂದು ಅರ್ಜಿಯಾಗಿತ್ತದು. ನನ್ನ ಕೈಯಕ್ಷರವನ್ನು ಕಂಡು ಅಧ್ಯಕ್ಷರು ಆಶ್ಚರ್ಯ ಚಕಿತರಾದರು.

'ಪ್ರಿಂಟ್ ಹಾಕಿದಂಗಿದೆಯಲ್ಲೋ ಮಾರಾಯ. ನೀನು ನನ್ನ ಪ್ರೈವೇಟ್ ಸೆಕ್ರಟರಿಯಾಗಿರು... ಏನು?'

ಅಧ್ಯಕ್ಷರು ಬರೆಯಬೇಕಾದ ಪತ್ರಗಳನ್ನೆಲ್ಲಾ ಬರೆದುಕೊಡುವ ಕೆಲಸ ನನ್ನದಾಯಿತು. ಭಿತ್ತಿಪತ್ರ ಬರೆಯೋದು, ಗೋಡೆ ಬರಹಗಳೆಲ್ಲಾ ಈ ಪಕ್ಷಕ್ಕೆ ಮುಖ್ಯವಾಗಿರಲಿಲ್ಲ. ಗೋಪೀನಾಥನ ಪಕ್ಷವು ಇದೇ ತಾನೆ ಮಾಡುತ್ತಿದ್ದಿದ್ದೆಂದು ನಾನು ತಪ್ಪಿತಸ್ಥ ಮನೋಭಾವದಿಂದ ಜ್ಞಾಪಿಸಿಕೊಂಡೆ. ಅದೃಷ್ಟವಶಾತ್ ಗೋಪಿನಾಥನೆಂಬ ನಾಯಕನ ಬಗ್ಗೆ ಅಧ್ಯಕ್ಷರಿಗೆ ಏನೂ ಗೊತ್ತಿರಲಿಲ್ಲ.

ಆಗೊಮ್ಮೆ ಈಗೊಮ್ಮೆ ಅಧ್ಯಕ್ಷರು ಮನೆಗೆ ಕರೆಸಿ ಊಟ ಹಾಕುತ್ತಿದ್ದರು. ಇವತ್ತು ಅಲ್ಲೇ ನನ್ನ ಊಟ. ಒಳ್ಳೆಯ ಮೀನು ಸಿಕ್ಕಿದೆಯಂತೆ.

'ಲೋ ಬಾರೋ ಮಗಾ, ಸುಮಕ್ಕ ಹೇಳಿದ್ದಾರೆ'

ಸುಮಕ್ಕ ಗೌರವಸ್ಥ ಮಹಿಳೆ. ಒಳ್ಳೆಯ

